# ವೃಕ್ಷಲಕ್ಷ ಆಂದೋಲನ ಕರ್ನಾಟಕ

*****************************************************************************************

## ಮಲೆನಾಡಿನ ಕೆರೆಗಳ ಸಂರಕ್ಷಣೆ
## ಈವರೆಗಿನ ನಮ್ಮ ಪ್ರಯೋಗಗಳು
## ನಮ್ಮ ಮುಂದಿರುವ ಸವಾಲುಗಳು :

ದಿನಾಂಕ: 15-3-2014 ಸ್ಥಳ: ಶ್ರೀ ಸ್ವರ್ಣವಲ್ಲೀ ಮಹಾಸಂಸ್ಥಾನ ಸೋಂದಾ ಶಿರಸಿ

: ಪಶ್ಚಿಮಘಟ್ಟದಲ್ಲಿ ಕೆರೆಗಳ ಸಂರಕ್ಷಣೆ ವಿಷಯದಲ್ಲಿ ಹತ್ತಾರು ಪ್ರಯೋಗಳನ್ನು ಈ 30 ವರ್ಷಗಳಲ್ಲಿ ನಡೆಸಿದ್ದನ್ನು ನೆನಪಿಸಬೇಕು.

1. ದೂರದ ದೇವರ ಹುಬ್ಬಳ್ಳಿ ಧಾರವಾಡದಲ್ಲಿ ವಿದ್ಯಾರ್ಥಿ ಪರಿಷತ್ ಮೂಲಕ 1978 ರಲ್ಲಿ ಕೆರೆ ಉಳಿಸಿ' ಶ್ರಮದಾನ ಮಾಡಿದಾಗ ಕೆರೆಯ ಮಹತ್ವ ತಿಳಿಯಿತು.
2. ಆರೋಗ್ಯ ವಿಕಾಸ ಪ್ರಕಲ್ಪ ಶಿವಮೊಗ್ಗಾ ಈ ಸಂಸ್ಥೆಯ ಕಾರ್ಯಕರ್ತನಾಗಿ ಶಿವಮೊಗ್ಗಾ ಮತ್ತೂರಿನ ಯುವಕರ ಜೊತೆ ಕೆರೆಯ ಸಂರಕ್ಷಣೆಗೆ ಮುಂದಾದಾಗ ಕೆರೆಯ ಕೆಲಸ ಸುಲಭಧವಾದುದಲ್ಲ ಎಂಬುದು ಅರ್ಥವಾಯಿತು.
3. ಫೇವಾರ್ಡನ ಗ್ರಾಮೀಣ ಅಭಿವೃದ್ಧಿ ಸಂಸ್ಥೆಗಳ ಜೊತೆ ಬಯಲು ಸೀಮೆಯ ಕೆರೆಗಳ ಜೀರ್ಣೋದ್ಧಾರ ಕಾರ್ಯ ನೋಡಿ ಬಂದು ಸಾಗರದ ಮರ್ತೂರು, ಹೊಸ ನಗರದ ಹನಿಯದ ಯುವಕರ ಜೊತೆ ಕೆರೆ ಶ್ರಮದಾನ ಶಿಬಿರ ನಡೆಸಿದ ಅನುಭವ ಹಸಿರಾಗಿದೆ.
4. ಹೊನ್ನಾವರದ ಶೆಟ್ಟಿಕೆರೆ ಮುಚ್ಚದಂತೆ ನಾವು ಹೋರಾಟ ನಡೆಸಲು ಸ್ನೇಹ ಕುಂಜದವರು ಸಹಾಯ ಮಾಡಿದರು.
5. ಸಾಗರದ ಬೃಹತ್ ಗಣಪತಿ ಕೆರೆಯನ್ನು ಮುಚ್ಚದಂತೆ ಹೋರಾಟ ಮಾಡಲು ಸಾಗರದ ಪ್ರಜ್ಞಾವಂತ ನಾಗರಿಕರು ಬೆಂಬಲ ನೀಡಿದರು.
6. ದೇವರುಕಾಡು ಉಳಿಸಿ ಅಭಿಯಾನವನ್ನು 90 ರ ದಶಕದಲ್ಲಿ ಕೈಗೆತ್ತಿಕೊಂಡಾಗ ನೂರಾರು ಕೆರೆಗಳ ಪಾರಿಸಾರಿಕ ಮಹತ್ವ ಬಿಂಬಿಸಲು ಸಾಧ್ಯವಾಯಿತು. ಕೆರೆ ಅತಿಕ್ರಮಣ ತಡೆಯಲು ಸಜ್ಜಾದೆವು. ಗ್ರಾಮ ಅರಣ್ಯ ಸಮಿತಿಗಳ ಮೂಲಕ ಕೆರೆ ಜೀರ್ಣೋದ್ಧಾರಕ್ಕೆ ಹತ್ತಾರು ಪ್ರಯೋಗ ಶುರು ಮಾಡಿದೆವು.
7. ಬಿಸಗೋಡ ಗಣಿ ಛಳುವಳಿಯಲ್ಲಿ, ಹೊಗ್ರೇಕಾನು, ಕೊಡಚಾದ್ರಿ, ಇನ್ನಿತರ ಗಣಿಗಾರಿಕೆ ವಿರೋಧೀ ಛಳುವಳಗಳಲ್ಲಿ ಕೆರೆಗಳು ಹೂಳು ತುಂಬಿ ನಾಶವಾಗುವುದನ್ನು ವಿರೋಧಿಸಿದೆವು. (1995,2001,2004)
8. ದೂರದ ಕುಲಬುರ್ಗಿಯ ಗೋಗಿ ಗ್ರಾಮದಲ್ಲಿ ಮುರೇನಿಯಂ ಅದಿರು ತೆಗೆದು ಕೆರೆ ಕಲ್ಮಷ ಮಾಡಿದ್ದನ್ನು ವಿರೋಧಿಸಿ ಅದನ್ನು ತಡೆದೆವು. (2011-12 ರಲ್ಲಿ)
9. ಹೊಸನಗರದ ಅಮ್ಮನ ಘಟ್ಟದಲ್ಲಿ ಜೇನು ಕಲ್ಲಮ್ಮ ದೇವಸ್ಥಾನದ ತೀರ್ಥ -ಕೆರೆ ಜೀಣೋದ್ಧಾರವನ್ನು ಅರಣ್ಯ ಸಮಿತಿ ಮೂಲಕ ನಡೆಸಿ ಯಶಸ್ವಿ ಆದೆವು.
10. ನದೀಮೂಲ ಉಳಿಸಿ ಅಭಿಯಾನದ ಮೂಲಕ ಖಾನಾಪುರ ತಾಲೂಕು ಮಲಪ್ರಭಾ ಮೂಲದ ಕೆರೆ ರಕ್ಷಣೆಗೆ ಮುಂದಾದೆವು. ಕುಮದ್ವತಿ ಮೂಲದಲ್ಲಿ ಕೆರೆಯ ಕಾಡು ರಕ್ಷಣೆ, ಮಾಡಿ ನೀರಿಲ್ಲದೆ ಒಣಗಿದ ಕೆರೆ-ತೀರ್ಥ ನೀರಿನಿಂದ ತುಂಬಿದೆ! (2012)
11. ಶರಾವತಿ ಮೂಲ ಅಂಬುತೀರ್ಥ ಕೆರೆ ಜೀರ್ಣೋದ್ಧಾರ ಯೋಜನೆಯನ್ನು ರೂಪಿಸಿ ಕಾರ್ಯರೂಪಕ್ಕೆ ತಂದೆವು. ಬಹು ಸಂತಸ ನೀಡಿದ ಸಂಗತಿ ಇದಾಗಿದೆ.
12. ಸಾಗರದ ವರದಾ ಮೂಲದಲ್ಲಿ ತೀರ್ಥಗಳ ಉಳಿವಿಗೆ ಶೀಗೇಹಳ್ಳಿ ಮಠದ ತೀರ್ಥದ ಜೀರ್ಣೋದ್ಧಾರ 2012-13ರಲ್ಲಿ ನಡೆಯಿತು. ವರದ ಹಳ್ಳಿಯ ಶ್ರೀಧರ ಆಶ್ರಮದ ಹಸಿರು ಪರ್ವತದ ಹಿಂಭಾಗದ ಚೌಡಿಕೆರೆ ಪುನರ್ ನಿರ್ಮಾಣ ಮಾಡಿದ್ದು 2012-13 ರಲ್ಲಿ.
13. ಶ್ರೀ ಸ್ವರ್ಣವಲ್ಲೀ ಸಸ್ಯ ಲೋಕದ ವನೀಕರಣದಿಂದಾಗಿ ಜಲಸಂವರ್ಧನೆ ಆದಾಗ ಕೆರೆ ನಿರ್ಮಾಣ ಮಾಡಿ ಅಲ್ಲಿಂದ ಶ್ರೀಮಠಕ್ಕೆ ಭಾಗಶಃ ನೀರಿನ ಪೂರೈಕೆ ಸಾಧ್ಯವಾಯಿತು. ಸಸ್ಯಲೋಕದ 15 ವರ್ಷಗಳ ಪ್ರಯತ್ನ ಬಹು ಉಪಯುಕ್ತ ಕಾರ್ಯ ಎನಿಸಿತು.

14. ಜಿಗಳೇಮನೆ (ಸಾಗರ ತಾಲೂಕ) ಗ್ರಾಮದಲ್ಲಿ ಕಾನು ರಕ್ಷಣೆ ಗ್ರಾಮ ಅರಣ್ಯ ಸಮಿತಿ ರಚನೆ, ಗ್ರಾಮ ಜನರ ಸಂಘಟನೆಯಿಂದ 3 ಕೆರೆಗಳ ಜೀರ್ಣೋದ್ಧಾರ ಸಾಧ್ಯವಾಯಿತು. 2012 ರಲ್ಲಿ.
15. ನೀಚಡಿ ಗ್ರಾಮದಲ್ಲಿ (ಸಾಗರ ತಾ) ಕೆರೆ ಉಳಿವಿಗೆ ಗ್ರಾಮದ ಯುವಕರೇ ಮುಂದಾದ ವಿಷಯ ಹೆಮ್ಮೆ ತರುವ ಸಂಗತಿ (2006-2007)
16. ಕಾನು ಸಂರಕ್ಷಣಾ ಯೋಜನೆಯಿಂದ ಸೊರಬ ತಾ। ನಲ್ಲಿ 4 ಕೆರೆಗಳು, ಶಿರಸಿ ಬಿಸ್ಲಕೊಪ್ಪಾ ಸೂರ್ಯದೇವಸ್ಥಾನ ಪುಷ್ಕರಿಣಿ, ತಾಳಗುಪ್ಪಾ ಸಮೀಪ ಕಲ್ಗಾರು ದೇವಸ್ಥಾನದ ಪವಿತ್ರ ತೀರ್ಥದ ಪುನರುಜ್ಜೀವನ ಕಾರ್ಯಕೈಗೊಂಡಾಗ ನಾವು ಬೆಂಬಲ ನೀಡಿದೆವು. ಗ್ರಾಮ ಅರಣ್ಯ ಸಮಿತಿ ಅಗಸಾಲ ಬೊಮ್ಮನಳ್ಳಿ ಇವರು 3 ಚಿಕ್ಕ ಕೆರೆಗಳನ್ನು ನಿರ್ಮಾಣ ಮಾಡಿದರು. (2014 ಜನವರಿ)
17. ಸೋಂದಾ ಮುಂಡಿಗೆ ಕೆರೆ ಶಿಬಿರದ ಮೂಲಕ ಮುಂಡಿಗೆ ರಕ್ಷಣೆಗೆ ಎಲ್ಲೆಡೆ ಗಮನ ನೀಡಲು ಸಾಧ್ಯವಾಯಿತು. ಅತಿಕ್ರಮಣ ಆಗುವುದನ್ನು ತಪ್ಪಿಸಲು ಸಾಧ್ಯವಾಯಿತು.
18. ಇಕ್ಕೇರಿ (ಸಾಗರ ಸಮೀಪ) ಧನ್ವಂತರಿ ವನ ರಕ್ಷಣೆ ಹಾಗೂ ಚಿಕ್ಕ ಕೆರೆ ನಿರ್ಮಾಣ ಮಾಡಿದ ಸಾಧನೆ ಅಲ್ಲಿನ ತರುಣರದ್ದು. (2013)
19. ರಾಂಪತ್ರೆ ಜಡ್ಡಿಗಳ ಉಳಿವಿಗೆ ಉತ್ತರ ಕನ್ನಡದಲ್ಲಿ ಅಧ್ಯಯನ, ಮಾದರಿ ಯೋಜನೆ ಜಾರಿ ಆಗಿದೆ. ದೇಶದಲ್ಲಿ ಇದು ಅನನ್ಯ ಯೋಜನೆ.
20. ಕೆರೆಗಳ ಉಳಿವಿಗೆ ಹಲವು ಪ್ರಯತ್ನಗಳು ನಡೆದಿವೆ. ನಾಡಿನ ಕೆರೆಗಳ ಅಭಿವೃದ್ಧಿಗೆ ಜಲಸಂವರ್ಧನೆ ಸಂಘ ಸ್ಥಾಪಿಸಿದಾಗ ಅದರ ಮುಖ್ಯ ನಿರ್ದೇಶಕರಾದ ಶ್ರೀ ಮದನ ಗೋಪಾಲ್ ಅವರನ್ನು ಶಿರಸಿಗೆ, ಶ್ರೀ ಸ್ವರ್ಣವಲ್ಲೀ ಮಠಕ್ಕೆ ಬಂದರು. ನಂತರದ ವರ್ಷಗಳಲ್ಲಿ ಕೆರೆ ಅಭಿವೃದ್ಧಿ ಸಂಘಗಳು ರಚನೆ ಆದವು. ಹಲವು ಹಳ್ಳಿಗಳಲ್ಲಿ ಕೆರೆ ಸಮಿತಿಗಳಿವೆ. ಕೆರೆ ಅಭಿವೃದ್ಧಿ ಯಶೋಗಾಥೆಗಳಿವೆ.
21. ಜಲಾನಯನ ಅಭಿವೃದ್ಧಿ ಇಲಾಖೆ, ಕಿರು ನೀರಾವರಿ ಇಲಾಖೆ, ಪಂಚಾಯತ, ನರೇಗಾ ಯೋಜನೆಳಲ್ಲಿ ಕೆರೆಹೂಳು ತೆಗೆಯುವ ಕಾರ್ಯಕ್ರಮಗಳು ನಡೆಯುತ್ತಿವೆ.
22. ಈ ಎಲ್ಲ ಪ್ರಯೋಗಗಳು, ಅನುಭವಗಳ ಹಿನ್ನೆಲೆಯಲ್ಲಿ ಮಲೆನಾಡಿನ ಕೆರೆಗಳ ಸಂರಕ್ಷಣೆಗೆ ಮುಂದಾಗಬೇಕಾದ ಸಂದರ್ಭವಿದೆ. ಕೆರೆಗಳ ಪ್ರಚಲಿತ ಸ್ಥಿತಿ ಗತಿಗಳ ಅಧ್ಯಯನ, ದಾಖಲಾತಿ ಕೆಲಸ ಅಷ್ಟೇ ಮುಖ್ಯ. ಅದೇ ರೀತಿ ಮಲೆನಾಡಿನ ಕೆರೆಗಳ ಸಂರಕ್ಷಣೆಯ ಸ್ವರೂಪ, ಜೀರ್ಣೋದ್ಧಾರ ಹೇಗೆ? ಹೂಳು ತೆಗೆಯುವ ಕಾರ್ಯ, ಕೆರೆ ಜಲಾನಯನ ರಕ್ಷಣೆ, ನೈಸರ್ಗಿಕ ಜೀವ ವೈವಿಧ್ಯ ಕಾಪಾಡುವ ವಿಷಯ; ವನೀಕರಣ ನಿರ್ವಹಣೆ; ಮಾಲಿನ್ಯ ತಡೆ; ಅತಿಕ್ರಮಣ ತಡೆ ಇವೆಲ್ಲ ವಿಷಯಗಳ ಕುರಿತು ಸಮಾಲೋಚನೆ ಮಾಡಬೇಕು.
23 ಕೆರೆ ಸಂರಕ್ಷಣೆ ಅಭಿಯಾನದ ಸ್ವರೂಪ. ಚರ್ಚಿತವಾಗಬೇಕು. ನವೆಂಬರ್‌ನ ಶಿರಸಿ ಕೆರೆ ಸಮ್ಮೇಳನ ಪೂರ್ವ ಬೇರೆ ಬೇರೆ ತಾಲೂಕು. ಜಿಲ್ಲೆ ಗಳಲ್ಲಿ ಈ ಬಗ್ಗೆ ಗೋಷ್ಠಿಗಳು ನಡೆಯಬೇಕು. ಹಳ್ಳಿಗಳ ಮಟ್ಟದಲ್ಲಿ ದಾಖಲಾತಿ, ಶಿಬಿರ, ಶ್ರಮದಾನ ಶಿಬಿರ, ಕೆರೆ ರಕ್ಷಣಾ ಯೋಜನೆ ತಯಾರಿ ಇವೆಲ್ಲ ಅವಶ್ಯ ಆಗಬೇಕಾದ ಹಂತಗಳು.
24 ಜೌಗು ಪ್ರದೇಶ, ಹಾಗೂ ಕೆರೆಗಳ ಉಳಿವೆಗೆ ಭಾರತೀಯ ವಿಜ್ಞಾನ ಸಂಸ್ಥೆಯ ವಿಜ್ಞಾನಿಗಳ ತಂಡ ಹಲವು ವರ್ಷಗಳಿಂದ ಅಂತರರಾಷ್ಟ್ರೀಯ ಮಟ್ಟದಲ್ಲಿ ಸಮ್ಮೇಳನ ನಡೆಸುತ್ತಿದೆ. 2010 ರಲ್ಲಿ ಬೆಂಗಳೂರಿನಲ್ಲಿ ಈ ಸಮ್ಮೇಳನದಲ್ಲಿ ಪಾಲ್ಗೊಂಡು ಉತ್ತಮ ಮಾಹಿತಿ ಲಭ್ಯವಾಗಿದೆ. ಇದೀಗ ನಾವೆಲ್ಲ ಸೇರಿ ಶಿರಸಿಯಲ್ಲಿ ಕೆರೆ ಸಮ್ಮೇಳನ ನಡೆಸಲು ಅವಕಾಶವಾಗುತ್ತಿದೆ. ಇಂದಿನ ಕಾರ್ಯಾಗಾರದಲ್ಲಿ ಹಲವು ಈ ಮೇಲಿನ ವಿಷಯ ಚರ್ಚಿತವಾಗಬೇಕು ಈ ಸಮ್ಮೇಳನದ ಸಂಚಾಲನಾ ಸಮಿತಿ ರಚಿಸಬೇಕು. ಸಂಪನ್ಮೂಲ ಕ್ರೋಢೀಕರಣ ಅಷ್ಟೆ ಮುಖ್ಯ. ಶ್ರೀ ಶ್ರೀ ಸೋಂದಾ ಸ್ವರ್ಣವಲ್ಲೀ ಸ್ವಾಮೀಜಿ ಅವರ ಗೌರವ ಅಧ್ಯಕ್ಷತೆ ಮಾರ್ಗದರ್ಶನದಲ್ಲಿ ಭಾರತೀಯ ವಿಜ್ಞಾನ ಸಂಸ್ಥೆಯ ಪರಿಸರ ವಿಜ್ಞಾನ ಕೇಂದ್ರದ ಸಹಯೋಗದಲ್ಲಿ ಮಲೆನಾಡಿನ ಆಸಕ್ತ ಸಂಘ-ಸಂಸ್ಥೆಗಳು ಸೇರಿ ಕೆರೆ ಸಂರಕ್ಷಣಾ ಅಭಿಯಾನ ಮತ್ತು ನವೆಂಬರ್ ಸಮ್ಮೇಳನ ಸಂಘಟಿಸೋಣ.

ಶ್ರೀ ಅನಂತ ಹೆಗಡೆ ಅಶೀಸರ
ಅಧ್ಯಕ್ಷರು, ವೃಕ್ಷಲಕ್ಷ ಆಂದೋಲನ